Teachingninja.in

Latest Govt Job updates

Private Job updates

Free Mock tests available

Visit - teachingninja.in

# KPSC
# GPSTR

## Previous Year Paper

### (Kannada Lang.) Paper-III
### 22 May, 2022

Teachingninja.in

EXAMINATION : 3 - 2022
PAPER CODE : 3A
SUBJECT CODE : P3-KA

Registration No.

Q.P. Booklet Sl. No. 1628126

# PAPER – 3, QUESTION PAPER BOOKLET

## SUBJECT : Language Ability (Descriptive Paper) – Kannada

**Maximum Marks : 100** **Maximum Time : 2.00 Hours** **Duration : 3.00 P.M. to 5.00 P.M.**

## INSTRUCTIONS TO THE CANDIDATES

**(Read carefully all the instructions given in the Question paper Booklet)**

1. The sealed Question Paper Booklet contains Descriptive questions for a total of **100** marks.

2. Calculator, Cell phone and other such electronic devices are not allowed in the examination hall.

3. If a candidate is found indulged in malpractice, such a candidate shall not be considered for recruitment and disciplinary action will be taken against him/her as per the rules.

4. Write the question numbers legibly in the Answer Booklet.

5. Do not repeat the answer for same question.

6. The Descriptive Answers should be written in same language of the medium of post declared in the Online application form. If candidate fails to do so, such answer papers will not be considered for evaluation.

   **Ex :** The candidates who applied for Kannada medium post, should answer Kannada Language Ability Paper.

7. Do not remove any sheet from the Question Paper Booklet.



Teachingninja.in

## ಪತ್ರಿಕೆ – 3
## ಕನ್ನಡ ಭಾಷಾ ಸಾಮರ್ಥ್ಯ

ಅಂಕಗಳು

I. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ. 5 × 1 = 5

1. ಸಾಮ್ರಾಟ
2. ಕೂಸು
3. ಪಿತೃ
4. ವನ
5. ವೃಕ್ಷ

ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ. 5 × 1 = 5

6. ಹತ್ತಿರ
7. ಕರುಣೆ
8. ಏರು
9. ಸ್ಥಿರ
10. ಸಿಹಿ

ಕೊಟ್ಟಿರುವ ನುಡಿಗಟ್ಟುಗಳ ಅರ್ಥವನ್ನು ಬರೆಯಿರಿ. 5 × 1 = 5

11. ಕಾಲಿಗೆ ಬುದ್ಧಿ ಹೇಳು
12. ಬೆನ್ನುತಟ್ಟು
13. ಅಟ್ಟಕ್ಕೇರಿಸು
14. ಹೊಂಚುಹಾಕು
15. ಕಣ್ಣು ಕೆಂಪಾಗು

ಕೊಟ್ಟಿರುವ ಗಾದೆಗಳನ್ನು ಪೂರ್ಣಗೊಳಿಸಿ. 5 × 1 = 5

16. ಬೆಳೆವ ಸಿರಿ ________.
17. ಮೂರ್ತಿ ಚಿಕ್ಕದಾದರೂ ________.
18. ಮನಸ್ಸಿದ್ದರೆ ________.
19. ಅಲ್ಪ ವಿದ್ಯೆ ________.
20. ಉಪಾಯ ಬಲ್ಲವನಿಗೆ ________.



Teachingninja.in

II. ಕೊಟ್ಟಿರುವ ಪದಗಳಿಗೆ ನೀಡಿರುವ ಸೂಚನೆಯಂತೆ ಉತ್ತರ ಬರೆಯಿರಿ.

21. ಕೊಟ್ಟಿರುವ ಪದಗಳು ಯಾವ ಭಾಷೆಯಿಂದ ಬಂದಿವೆ ತಿಳಿಸಿ. $2 \times 1 = 2$

(ಅ) ಉರುಸು

(ಆ) ದಿವಾನ

22. ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿರಿ. $2 \times 1 = 2$

(ಅ) ರವೀಂದ್ರ

(ಆ) ಮಾತಿಲ್ಲ

23. ಕೊಟ್ಟಿರುವ ಪದಗಳನ್ನು ಬಳಸಿ ಸ್ವಂತವಾಕ್ಯವನ್ನು ಮಾಡಿ ಬರೆಯಿರಿ. $2 \times 1 = 2$

(ಅ) ಅಭಿಲಾಷೆ

(ಆ) ಕಸರತ್ತು

24. ಕೊಟ್ಟಿರುವ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸವನ್ನು ಹೆಸರಿಸಿರಿ. $2 \times 1 = 2$

(ಅ) ಮುಂಗಾಲು

(ಆ) ಕೆರೆಕಟ್ಟೆ ಬಾವಿಗಳು

25. ಕೆಳಗೆ ಕೊಟ್ಟಿರುವ ಹೇಳಿಕೆಗಳಿಗೆ ಸೂಕ್ತವಾದ ಒಂದು ಪದವನ್ನು ಬರೆಯಿರಿ. $2 \times 1 = 2$

(ಅ) ಅರಳದೆ ಇರುವ ಹೂ

(ಆ) ಉದ್ದವಾಗಿ ಬಾಗಿರುವ ತುತ್ತೂರಿ

26. ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ವಿಭಕ್ತಿಯನ್ನು ಹೆಸರಿಸಿರಿ. $2 \times 1 = 2$

(ಅ) ಬಂಡಿಯೊಳ್

(ಆ) ಮರಕ್ಕೆ

27. ಕೊಟ್ಟಿರುವ ವಾಕ್ಯಗಳಲ್ಲಿ ಬಂದಿರುವ ಸರ್ವನಾಮ ಪದವನ್ನು ಆರಿಸಿ ಬರೆಯಿರಿ. $2 \times 1 = 2$

(ಅ) 'ಸ್ವಾಮಿ, ನಾನು ಹೆದರಿ ಬಂದ ಹೇಡಿಯಲ್ಲ'

(ಆ) 'ಅವರು ಮೋಸ, ವಂಚನೆ ಮಾಡುವವರಲ್ಲ'

28. ಕೊಟ್ಟಿರುವ ವಾಕ್ಯಗಳಲ್ಲಿ ಬಂದಿರುವ ಅವ್ಯಯ ಪದವನ್ನು ಆರಿಸಿ ಬರೆಯಿರಿ. $2 \times 1 = 2$

(ಅ) ಆಹಾ ! ಈ ನೀರು, ಸಕ್ಕರೆಯ ಪಾನಕದಂತಿದೆ

(ಆ) ಹೌದು, ಅವನಿಗೆ ಎಲ್ಲರ ಗುರುತೂ ಇರುತ್ತದೆ



Teachingninja.in
Teachingninja.in

29. ಕೊಟ್ಟಿರುವ ವಾಕ್ಯಗಳ ವಚನವನ್ನು ಬದಲಿಸಿ ಬರೆಯಿರಿ. $2 \times 1 = 2$

(ಅ) ಹಕ್ಕಿಗಳು ಆಕಾಶದಲ್ಲಿ ಹಾರುತ್ತಿವೆ

(ಆ) ನಾನು ಮನೆಯಲ್ಲಿ ಇದ್ದೇನೆ

30. ಮೊದಲೆರಡು ಪದಗಳಿಗೆ ಇರುವ ಸಂಬಂಧವನ್ನು ಗುರುತಿಸಿ ಮೂರನೆಯ ಪದಕ್ಕೆ ಸಂಬಂಧಿಸಿದಂತೆ, ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ. $2 \times 1 = 2$

(ಅ) ಶಿವಮೊಗ್ಗ : ಮಲೆನಾಡು : : ಬೆಳಗಾವಿ : ______

(ಆ) ನಮೋ ನಮೋ : ದ್ವಿರುಕ್ತಿ : : ಧೀರ ಶೂರ : ______

31. ಕೊಟ್ಟಿರುವ ವಾಕ್ಯಗಳನ್ನು ಭೂತಕಾಲಕ್ಕೆ ಪರಿವರ್ತಿಸಿ ಬರೆಯಿರಿ. $2 \times 1 = 2$

(ಅ) ಮೇರಿ ಶಾಲೆಗೆ ಹೋಗುತ್ತಾಳೆ

(ಆ) ಹುಡುಗನು ಊಟ ಮಾಡುವನು

32. ಕೊಟ್ಟಿರುವ ಪದಗಳಿಗೆ ತತ್ಸಮ – ತದ್ಭವ ಬರೆಯಿರಿ. $2 \times 1 = 2$

(ಅ) ಬೇಸಾಯ

(ಆ) ಸಂತೋಷ

33. ಕೊಟ್ಟಿರುವ ವಾಕ್ಯಗಳಿಗೆ ಸೂಕ್ತವಾದ ಲೇಖನ ಚಿಹ್ನೆಗಳನ್ನು ಹಾಕಿ. $2 \times 1 = 2$

(ಅ) ಅಜ್ಜ ಜಾತ್ರೆಯಲ್ಲೇಕೆ ಇಷ್ಟೊಂದು ಅಂಗಡಿಗಳು

(ಆ) ಸ್ವಾಮಿ ನಮ್ಮಯ ದೇವರು ಬಂದಾನ ಬನ್ನಿರೆ

34. ಕೊಟ್ಟಿರುವ ಪದಗಳಿಗೆ ಗ್ರಾಂಥಿಕ ರೂಪವನ್ನು ಬರೆಯಿರಿ. $2 \times 1 = 2$

(ಅ) ನಮ್ಮೂರ್ನಾಗೆ

(ಆ) ನೋಡಾಲು

35. ಕೊಟ್ಟಿರುವ ವಾಕ್ಯಗಳಲ್ಲಿ ಜೋಡಿನುಡಿ / ದ್ವಿರುಕ್ತಿಗಳನ್ನು ಗುರುತಿಸಿ ಬರೆಯಿರಿ. $2 \times 1 = 2$

(ಅ) ದೊಡ್ಡ ಪಾತ್ರೆಯಲ್ಲಿ ಬಿಸಿ ಬಿಸಿ ಕಾಫೀ ತಂದರು

(ಆ) ರಾಮನು ಪೇಟೆಯಿಂದ ಹಣ್ಣು ಹಂಪಲು ತಂದನು



Teachingninja.in

**III.** ಕೊಟ್ಟಿರುವ ಗದ್ಯಭಾಗಗಳನ್ನು ಓದಿ ಅರ್ಥೈಸಿಕೊಂಡು ಅವುಗಳ ಮುಂದೆ ನೀಡಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

**36. ಗದ್ಯಭಾಗ : 1** **5 × 1 = 5**

ಪ್ರೊ. ಕೆ.ಎಸ್. ನಿಸಾರ್ ಅಹಮ್ಮದ್ ಇವರು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ 1936 ಫೆಬ್ರವರಿ 5 ರಂದು ಜನಿಸಿದರು. ತಂದೆ ಷೇಕ್ ಹೈದರ್, ತಾಯಿ ಹಮೀದಾ ಬೇಗಂ, ಭೂಗರ್ಭ ಶಾಸ್ತ್ರದಲ್ಲಿ ಪದವಿ ಪಡೆದು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗಿ ವೃತ್ತಿಯನ್ನು ಪ್ರಾರಂಭಿಸಿದರು. ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಇವರಿಗೆ ಅನೇಕ ಪ್ರಶಸ್ತಿಗಳು ಲಭಿಸಿದ್ದು, ಶಿವಮೊಗ್ಗದಲ್ಲಿ 2007 ರಲ್ಲಿ ಜರುಗಿದ 73 ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರು ವಿಡಂಬನಾತ್ಮಕ ಕವಿತೆಗಳನ್ನು ರಚಿಸಿರುವರು. ಇವರ ಕವಿತೆಗಳು ತೀರಾಸರಳ, ವಾಚಕರ ಹೃದಯದೊಂದಿಗೆ ಮಾತಾಡಿಸಿಕೊಂಡು ಹೋಗುತ್ತಿರುವಂತೆ ಭಾಸವಾಗುತ್ತವೆ. ಇವರು ನವೋದಯ, ನವ್ಯ ಎರಡೂ ಸಾಹಿತ್ಯ ಮಾರ್ಗಗಳಲ್ಲೂ ಕಾವ್ಯ ರಚಿಸಿರುವರು. ಮನಸು ಗಾಂಧಿ ಬಜಾರು, ನೆನೆದವರ ಮನದಲ್ಲಿ, ನಿತ್ಯೋತ್ಸವ, ನವೋಲ್ಲಾಸ ಮುಂತಾದ ಕವನ ಸಂಕಲನಗಳು, ಎ ಮಿಡ್ ಡೆ ಸಮ್ಮರ್ ನೈಟ್ ಡ್ರೀಮ್ಸ್, ಒಥೆಲೊ – ಅನುವಾದ ಕೃತಿಗಳು. 'ಹಕ್ಕಿಗಳು' ಮಕ್ಕಳ ಸಾಹಿತ್ಯ ಮುಂತಾಗಿ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿರುವರು.

**ಪ್ರಶ್ನೆಗಳು :**
(ಅ) ಪ್ರೊ. ಕೆ.ಎಸ್. ನಿಸಾರ್ ಅಹಮ್ಮದರು ಎಲ್ಲಿ ತಮ್ಮ ವೃತ್ತಿಯನ್ನು ಆರಂಭಿಸಿದರು ?
(ಆ) ಪ್ರೊ. ಕೆ.ಎಸ್. ನಿಸಾರ್ ಅಹಮ್ಮದರು ಯಾವ ಕಾವ್ಯ ಮಾರ್ಗಗಳಲ್ಲಿ ಕವಿತೆ ರಚಿಸಿರುವರು ?
(ಇ) ಪ್ರೊ. ಕೆ.ಎಸ್. ನಿಸಾರ್ ಅಹಮ್ಮದ್ ಅವರ ಕವನಗಳ ವೈಶಿಷ್ಟ್ಯವೇನು ?
(ಈ) ಪ್ರೊ. ಕೆ.ಎಸ್. ನಿಸಾರ್ ಅಹಮ್ಮದ್ ಅವರ ಪ್ರಮುಖ ಕವನ ಸಂಕಲನಗಳನ್ನು ಹೆಸರಿಸಿರಿ.
(ಉ) ಪ್ರೊ. ಕೆ.ಎಸ್. ನಿಸಾರ್ ಅಹಮ್ಮದ್ ಯಾವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು ?

**37. ಗದ್ಯಭಾಗ : 2** **5 × 1 = 5**

ಪಶ್ಚಿಮ ಘಟ್ಟಗಳ ನಿಜವಾದ ಪತನ ಪ್ರಾರಂಭವಾದದ್ದು ಸ್ವಾತಂತ್ರ್ಯ ಬಂದ ಮೇಲೇ. ಒಂದು ಕಡೆ ಏರುತ್ತಿರುವ ಜನಸಂಖ್ಯೆಯಿಂದಾಗಿ ಕೃಷಿ ಭೂಮಿಯ ವಿಸ್ತರಣೆಗೆಂದು ರೈತರು ಅರಣ್ಯ ಕಡಿದು ಅತಿಕ್ರಮ ಸಾಗುವಳಿ ಆರಂಭಿಸಿದ್ದು, ಇನ್ನೊಂದು ಕಡೆ ಅರಣ್ಯ ಹುಟ್ಟುವಳಿಗಳಾದ ಮೆಣಸು, ದಾಲ್ಚಿನ್ನಿ, ಜೇನು, ಭತ್ತ, ರಾಳ, ಧೂಪ, ಬಗಿನೆ, ಬಿದುರುಗಳಿಗೆ ಬೇಡಿಕೆ ಹೆಚ್ಚಾದ್ದರಿಂದ ಹಣದಾಸೆಗೆ ಕಾಡುದೋಚುವವರ ಸಂಖ್ಯೆ ಹೆಚ್ಚಾದದ್ದು, ಇವೆಲ್ಲಕ್ಕಿಂತ ಹೆಚ್ಚಾಗಿ ದೇಶದ ಅಭಿವೃದ್ಧಿಗೆಂದು ಉದ್ದಿಮೆಗಳನ್ನು ಸ್ಥಾಪಿಸಿ ಖನಿಜ, ವಿದ್ಯುತ್ತಿಗೆಂದು ಸರಕಾರವೇ ಪಶ್ಚಿಮ ಘಟ್ಟಕ್ಕೆ ಲಗ್ಗೆ ಹಾಕಿದ್ದು, ಕಾಪಾಡಬೇಕಿದ್ದ ಮಾಲೀಕನೇ ತನ್ನ ನೂರು ತೋಳುಗಳಿಂದ ಕಾಡಿಗೆ ಕೊಡಲಿ ಬೀಸಿದ್ದು, ತಾನು ದೋಚುವುದಷ್ಟೇ ಅಲ್ಲದೆ ದೋಚಲು ಸಿದ್ಧರಾದ ಖಾಸಗಿ ಉದ್ದಿಮೆದಾರರನ್ನೆಲ್ಲ ಕರೆದು ಕೊಡಲಿ, ಗುದ್ದಲಿ, ಸಿಡಿಮದ್ದು ನೀಡಿದ್ದು ಈ ಕೊಡಲಿ, ಗುದ್ದಲಿ, ಸಿಡಿಮದ್ದುಗಳಿಂದ ಪಶ್ಚಿಮ ಘಟ್ಟಗಳು ತತ್ತರಿಸುತ್ತಿವೆ. ನೋಡ ನೋಡುತ್ತ ನಿರ್ನಾಮವಾಗುತ್ತಿವೆ.

**ಪ್ರಶ್ನೆಗಳು :**
(ಅ) ಅರಣ್ಯದ ಹುಟ್ಟುವಳಿಗಳಾವುವು ?
(ಆ) ಅಭಿವೃದ್ಧಿಯ ಹೆಸರಿನಲ್ಲಿ ಪಶ್ಚಿಮ ಘಟ್ಟಗಳು ಹೇಗೆ ಪತನವಾಗುತ್ತಿವೆ ?
(ಇ) ರೈತರು ಅತಿಕ್ರಮ ಸಾಗುವಳಿ ಆರಂಭಿಸಿದ್ದು ಏಕೆ ?
(ಈ) ಪಶ್ಚಿಮ ಘಟ್ಟಗಳ ನಿಜವಾದ ಪತನ ಪ್ರಾರಂಭವಾದದ್ದು ಯಾವಾಗ ?
(ಉ) ಪಶ್ಚಿಮ ಘಟ್ಟಗಳು ಯಾವುದರಿಂದ ತತ್ತರಿಸುತ್ತಿವೆ ?



Teachingninja.in

38. ಗದ್ಯಭಾಗ : 3 5 × 1 = 5

ದಾಸಕೂಟದಲ್ಲಿ ಅತ್ಯಂತ ಶ್ರೇಷ್ಠರೆನಿಸಿದವರು ಪುರಂದರದಾಸರು. ಇವರ ಕಾಲ 1484 ರಿಂದ 1564. ಇವರ ಜನ್ಮಸ್ಥಳ ಪುರಂದರಗಡ. ಇವರ ತಂದೆ ವರದಪ್ಪ. ಪುರಂದರ ದಾಸರ ಮೊದಲ ಹೆಸರು ಶ್ರೀನಿವಾಸ, ಮಹಾ ಜಿಪುಣ, ಒಂದು ಘಟನೆಯಿಂದ ಅವನು ವೈರಾಗ್ಯವನ್ನು ತಾಳಿದನು. ಒಮ್ಮೆ ಬಡ ಬ್ರಾಹ್ಮಣನೊಬ್ಬ ಶ್ರೀನಿವಾಸನ ಬಳಿ ಬಂದು ಸಹಾಯ ಕೇಳಲು, ಸಾಕಾಗುವಷ್ಟು ಹಣ ದೊರೆಯದ ಕಾರಣ, ಶ್ರೀನಿವಾಸನ ಪತ್ನಿಯ ಬಳಿ ಬ್ರಾಹ್ಮಣನು ಧನ ಬೇಡುವನು. ಆಕೆಯ ಹೆಸರು ಸರಸ್ವತಿ. ಆಕೆ ತನ್ನ ವಜ್ರದ ಮೂಗುತಿಯನ್ನೇ ಕೊಡುವಳು. ಬ್ರಾಹ್ಮಣನು ಅದನ್ನು ಶ್ರೀನಿವಾಸನ ಬಳಿಗೆ ಒಯ್ದು ಕೊಡಲು ಅದನ್ನು ಗುರುತಿಸಿದ ಶ್ರೀನಿವಾಸ ಕೋಪಗೊಂಡು ಅಂಗಡಿಯಲ್ಲೇ ಮೂಗುತಿಯನ್ನಿಟ್ಟು ಬಂದು ಪತ್ನಿಯನ್ನು ವಿಚಾರಿಸಿದಾಗ, ಆಕೆ ಭಯಗೊಂಡು ತನಗಿನ್ನು ಸಾವೇ ಗತಿ ಎಂದು ವಿಷ ಸೇವಿಸಲು ಮುಂದಾಗುವಳು. ವಿಷದ ಬಟ್ಟಲನ್ನು ಎತ್ತಿದಾಗ ಆ ಬಟ್ಟಲಲ್ಲೇ ಮೂಗುತಿ ಕಂಡು ಬರುವುದು. ಈ ಘಟನೆಯಿಂದ ಜ್ಞಾನೋದಯ ಪಡೆದ ಶ್ರೀನಿವಾಸ ತನ್ನ ಐಶ್ವರ್ಯವನ್ನೆಲ್ಲಾ ಬಡವರಿಗೆ ದಾನ ಮಾಡಿ ಭಕ್ತನಾಗಿ, ತಾಳ, ತಂಬೂರಿಯೊಡನೆ ಹೆಂಡತಿ ಮಕ್ಕಳ ಸಮೇತ ಹಂಪೆಗೆ ಹೊರಟನು. ಅಲ್ಲಿ ವ್ಯಾಸರಾಯರ ಶಿಷ್ಯನಾಗಿ ದೀಕ್ಷೆ ಪಡೆದು ಪುರಂದರ ದಾಸನಾದನು.

ಪ್ರಶ್ನೆಗಳು : (ಅ) ಪುರಂದರದಾಸರ ಮೊದಲ ಹೆಸರೇನು ?

(ಆ) ಸರಸ್ವತಿ ವಿಷ ಸೇವಿಸಲು ಮುಂದಾಗಲು ಕಾರಣವೇನು ?

(ಇ) ಬ್ರಾಹ್ಮಣನು ಧನ ಬೇಡಿದಾಗ ಸರಸ್ವತಿ ಏನು ಕೊಡುವಳು ?

(ಈ) ವಜ್ರದ ಮೂಗುತಿ, ಸರಸ್ವತಿಗೆ ಎಲ್ಲಿ ಕಂಡಿತು ?

(ಉ) ಜ್ಞಾನೋದಯ ಪಡೆದ ಶ್ರೀನಿವಾಸರು ಹೇಗೆ ಪುರಂದರ ದಾಸರಾದರು ?

39. ಗದ್ಯಭಾಗ : 4 5 × 1 = 5

ಪೆರು ದೇಶದ ಪರ್ವತ ಶ್ರೇಣಿಗಳ ಹಿಮನದಿಗಳೇ ಅಮೆಜಾನ್ ನದಿಯ ಉಗಮಸ್ಥಾನ. ತಣ್ಣಗೆ ಸ್ಫಟಿಕದಷ್ಟು ಶುಭ್ರವಾಗಿ ಅಮೆಜಾನ್ ಆಂಡೀಸ್ ಪರ್ವತ ಶ್ರೇಣಿಗಳಿಂದ ತನ್ನ ಮಹಾಯಾತ್ರೆಯನ್ನು ಆರಂಭಿಸುತ್ತದೆ. ಕೊಂಚದೂರ ಹರಿಯುವುದರೊಳಗೆ ಅಕ್ಕಪಕ್ಕದಿಂದೆಲ್ಲ ಬಂದು ಸೇರುವ ಹಳ್ಳಗಳಿಂದ ಅದರ ವೇಗ ವರ್ಧಿಸತೊಡಗುತ್ತದೆ. ಪರ್ವತಗಳಿಂದ ಕೊಚ್ಚಿ ಬರುವ ಮಣ್ಣಿನಿಂದ ಅದರ ನೀರು ಕೆಂಪಾಗುತ್ತದೆ. ಅಲ್ಲಿಂದ ನೂರಾರು ಮೈಲಿಗಳು ಪರ್ವತಗಳ ಕೊರಕಲುಗಳಲ್ಲಿ ಪ್ರಪಾತಗಳಲ್ಲಿ ಭೋರ್ಗರೆಯುತ್ತ ಅಮೆಜಾನ್ ಉರವಣಿಸಿ ನುಗ್ಗುತ್ತದೆ. ಅಮೆಜಾನ್ ಬ್ರೆಜಿಲ್ಲಿನ ಭಯಂಕರ ಕಾಡುಗಳ ಸಮತಳ ಪ್ರದೇಶಕ್ಕೆ ಬರುವ ವೇಳೆಗೆ ಆಸ್ಫೋಟಿಸುವಂತೆ ಕುದಿಯುತ್ತದೆ. ಅಮೆಜಾನ್ ಕಾಡುಗಳನ್ನು ಸೇರಿದ ನಂತರ ನೂರಾರು ದೊಡ್ಡ ದೊಡ್ಡ ನದಿಗಳು ಬಂದು ಅಮೆಜಾನ್ ನದಿಯನ್ನು ಸೇರುತ್ತವೆ. ಅಮೆಜಾನ್ ಜಲಾನಯನ ಪ್ರದೇಶ ಲಕ್ಷ ಲಕ್ಷ ಚದರ ಮೈಲುಗಳಾಗಿರುವುದರಿಂದ ಒಂದಲ್ಲ ಒಂದು ನದಿ ಯಾವಾಗಲೂ ಪ್ರವಾಹದಿಂದ ಭೋರ್ಗರೆಯುತ್ತ ಬಂದು ಸೇರುತ್ತದೆ.

ಪ್ರಶ್ನೆಗಳು : (ಅ) ಅಮೆಜಾನ್ ನದಿಯ ಮಹಾಯಾತ್ರೆ ಎಲ್ಲಿಂದ ಪ್ರಾರಂಭವಾಗುತ್ತದೆ ?

(ಆ) ಅಮೆಜಾನ್ ಬ್ರೆಜಿಲ್‌ನ ಕಾಡುಗಳಿಗೆ ಬರುವಷ್ಟರಲ್ಲಿ ಏನಾಗುತ್ತದೆ ?

(ಇ) ಅಮೆಜಾನ್ ನದಿಯ ವೇಗ ಹೇಗೆ ವರ್ಧಿಸುತ್ತದೆ ?

(ಈ) ಅಮೆಜಾನ್ ನದಿಯ ಉಗಮಸ್ಥಾನ ಯಾವುದು ?

(ಉ) ಅಮೆಜಾನ್ ನದಿಯ ನೀರು ಕೆಂಪಾಗಲು ಕಾರಣವೇನು ?



Teachingninja.in

ಕೊಟ್ಟಿರುವ ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರ ಬರೆಯಿರಿ.

40. 'ನನ್ನ ಜೀವನದ ಗುರಿ' ಈ ವಿಷಯವನ್ನು ಕುರಿತು 100 – 120 ಪದಗಳಿಗೆ ಮೀರದಂತೆ ಟಿಪ್ಪಣಿಯನ್ನು ಬರೆಯಿರಿ. $1 \times 5 = 5$

41. 'ಕೋಟಿ ವಿದ್ಯೆಗಳಲಿ ಮೇಟಿ ವಿದ್ಯೆಯೇ ಮೇಲು' ಈ ಗಾದೆಯ ಮಹತ್ವವನ್ನು ವಿಸ್ತರಿಸಿ ಬರೆಯಿರಿ. $1 \times 5 = 5$

42. 'ನಿಜವಾದ ಶಿಕ್ಷಣವೆಂದರೆ ಮಾನವೀಯತೆಯ ವಿಕಾಸ' ಈ ಹೇಳಿಕೆಯನ್ನು ಕುರಿತು 100 – 120 ಪದಗಳಿಗೆ ಮೀರದಂತೆ ವಿವರಿಸಿರಿ. $1 \times 5 = 5$

43. ಕೊಟ್ಟಿರುವ ಪದ್ಯಭಾಗವನ್ನು ಓದಿಕೊಂಡು ನಿಮ್ಮ ಮಾತುಗಳಲ್ಲಿ ಸಾರಾಂಶವನ್ನು ಬರೆಯಿರಿ. $1 \times 5 = 5$

ಸದ್ದು ಮಾಡದೆ ಬಾಳು ಬಾಳೆಲವೊ ಜೀವ
ಗದ್ದಲದ ಬಿರುದಿರದೆ ಸೇರು ದೇವ
ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು
ದೀಪದೆದುರಿಗೆ ತಿಮಿರ ಸರಿಯುವಂತೆ
ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು
ಕೂಗಾಡಿ ಹಾರಾಡಿ ಫಲವದೇನು ?

44. ಕೊಟ್ಟಿರುವ ಚಿತ್ರವನ್ನು ಗಮನಿಸಿ 100 – 120 ಪದಗಳಲ್ಲಿ ನಿಮ್ಮ ಅಭಿಪ್ರಾಯ ಬರೆಯಿರಿ. $1 \times 5 = 5$



45. ನಿಮ್ಮನ್ನು ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಹೊಸಳ್ಳಿಯ ವನಜ ಎಸ್.ಆರ್. ಎಂದು ಭಾವಿಸಿಕೊಂಡು ನಿಮ್ಮ ಗ್ರಾಮದ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ ನಿಮ್ಮ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ. $1 \times 5 = 5$



Teachingninja.in